

# ದೃಷ್ಟಿ ಕಣ್ಣಿಗೆ ಎಷ್ಟೊಂದು ಬಣ್ಣ!

■ ರೂಪಾ

ಚಂದದ ಸೀರೆಯುಟ್ಟ ಮರುದಿನ ಮೈ ಬೆಚ್ಚಗಾದರೆ, ಅಜ್ಜಿ ಮೊದಲು ತೆಗೆಯುತ್ತಿದ್ದುದ್ದು ದೃಷ್ಟಿ. ಗುಳಿಕೆನ್ನೆ ಬೀಳುವ ಮಗುವನ್ನು ಎಲ್ಲೆಂದರಲ್ಲಿ ಸುತ್ತಿಸಬೇಡ, ಹಾಗೊಮ್ಮೆ ಸುತ್ತಿಸಿ ಮನೆಗೆ ಕರೆದುಕೊಂಡು ಬಂದರೆ ಮೊದಲು ಮಾಡಬೇಕಾದದ್ದೇ ದೃಷ್ಟಿ ನೀವಾಳಿಸುವುದು, ಮಗು ಊಟ ಮಾಡುತ್ತಿಲ್ಲವ, ಕರಿ ದಾರವೊಂದನ್ನು ಸುಮ್ಮನೆ ಸೊಂಟಕ್ಕೆ ಸುತ್ತಿಬಿಡು ಎನ್ನುವುದು ಅವಳು ಸದಾ ನೀಡುವ ಸಲಹೆ.

ಗಂಡು ಮಕ್ಕಳಿಗಾಗಲಿ, ಹೆಣ್ಣುಮಕ್ಕಳಿಗಾಗಲಿ ಎಡಗಾಲಿಗೊಂದು ಕಪ್ಪು ದಾರ ಹಾಕಿದರೆ ಇರುವ ದೃಷ್ಟಿ ದೋಷವನ್ನು ಕಪ್ಪು ನುಂಗುತ್ತದೆ ಎಂಬ ನಂಬಿಕೆ ಇಂದಿಗೂ ಇದೆ.

ಹೊಟ್ಟೆಯೊಳಗಿರುವ ಕಿಚ್ಚು, ಎದುರಿಗಿರುವ ವ್ಯಕ್ತಿಗೆ ಕೇಡು ಉಂಟು ಮಾಡಲು ಹೆಚ್ಚೇನೂ ಸಮಯ ತಾಗದು ಎನ್ನುವುದು ಅದನ್ನು ಬಲವಾಗಿ ನಂಬುವವರ ಪ್ರತಿಪಾದನೆ. ಹಾಗಾಗಿ ಈ ಕಿಚ್ಚಿಗೆ ಮದ್ದನ್ನು ಆಗಾಗ್ಗೆ ಧರಿಸುವ ಆಭರಣಗಳಲ್ಲಿ ಇರಿಸಿಕೊಂಡಿದೆ ಫ್ಯಾಷನ್ ಜಗತ್ತು. ಮೊದಲೆಲ್ಲ ದೃಷ್ಟಿ ನೀವಾಳಿಸುವುದಕ್ಕೆ ಕಪ್ಪು ಬಣ್ಣವೊಂದು ನೆಪವಾಗುತ್ತಿತ್ತು. ಈಗ ದೃಷ್ಟಿದೋಷ ನಿವಾರಣೆಗೆ ಉಂಟು ಹಲವು ಬಣ್ಣ.

ದುಷ್ಟ ದೃಷ್ಟಿ ಅಥವಾ ಕೆಟ್ಟದೃಷ್ಟಿ ಪರಿಕಲ್ಪನೆ (ಇವಿಲ್ ಐ) ಯಾವಾಗಿನಿಂದ ಆರಂಭವಾಯಿತು ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯ ಇಲ್ಲದೇ ಇದ್ದರೂ, ಇದರ ಮೂಲವು ಪ್ರಾಚೀನ ಮೆಸಪಟೋಮಿಯಾದಲ್ಲಿ ಉಂಟಾಯಿತು ಎಂದು ನಂಬಲಾಗಿದೆ. ನಕಾರಾತ್ಮಕ ಶಕ್ತಿ, ಹಾನಿ ಮಾಡಲೆಂದೇ ಸೃಷ್ಟಿಯಾದ ಶಕ್ತಿಗಳನ್ನು ದಮನ ಮಾಡಲಿಕ್ಕೆ ನಾವು ಧರಿಸುವ ಲೋಹಗಳಿಂದ ಸಾಧ್ಯ ಎಂಬುದನ್ನು ಬಲವಾಗಿ ನಂಬಲಾಗಿತ್ತು. ಪಾದರಕ್ಷೆಗಳು, ಚೀಲಗಳು, ಹೂವಿನ ಅಲಂಕಾರಿಕ ಕುಂಡಗಳು ಹಾಗೂ ಮನೆಯ ಒಳಾಂಗಣ ಅಲಂಕಾರಿಕ ವಸ್ತುಗಳನ್ನು ದೃಷ್ಟಿ ದೋಷ ನಿವಾರಣೆಯ ಪರಿಕರಗಳಾಗಿ ಬಳಸಲಾಗುತ್ತಿತ್ತು.

ಈಗೀಗ 'ಇವಿಲ್ ಐ' ಚಿಹ್ನೆ ಇರುವ ಬ್ರೇಸ್ಲೆಟ್, ಕತ್ತಿನ ಸರ, ಉಂಗುರ, ಬಳೆ, ಆ್ಯಂಕ್ಲೆಟ್ ಸೇರಿದಂತೆ ಬಹುತೇಕ ಆಭರಣಗಳು ಲಭ್ಯವಿದೆ. ದುಷ್ಟ ದೃಷ್ಟಿ (ಇವಿಲ್ ಐ) ಆಭರಣಗಳಲ್ಲಿ ಪ್ರತಿಯೊಂದು ಬಣ್ಣಕ್ಕೂ ಅದರದೇ ಆದ ವಿಶೇಷ ಅರ್ಥ ಮತ್ತು ರಕ್ಷಣಾತ್ಮಕ ಗುಣವಿದೆ. ಗಾಢ ನೀಲಿ ಬಣ್ಣಕ್ಕೆ ಆಗಸದ ತಿಳಿ ನೀಲಿ ಬಣ್ಣ ಹಾಗೂ ಬಿಳಿ ಬಣ್ಣ ಸೇರಿಸಿ ಮಾಡಿದ ಕಣ್ಣಿನ ಚಿಹ್ನೆ ಇವಿಲ್ ಐ ಆಭರಣಗಳಲ್ಲಿ ಇರುವುದು ಸಾಮಾನ್ಯ. ಇದನ್ನು ಹೊರತುಪಡಿಸಿದರೆ ಕಿತ್ತಳೆ ಬಣ್ಣ ರಕ್ಷಣೆಗಾದರೆ, ತಿಳಿ ನೀಲಿ ಬಣ್ಣ ಶಾಂತಿಗೆ, ಅರಿಶಿನ ಬಣ್ಣ ಮಾನಸಿಕ ಸ್ಥಿರತೆಗೆ, ಸ್ಫೂರ್ತಿಗೆ ಗಾಢ ಹಸಿರು, ಅಭಿವ್ಯಕ್ತಿಗೆ ನೇರಳೆ, ಧೈರ್ಯಕ್ಕೆ ಕೆಂಪು, ತಿಳಿ ಹಸಿರು ಆರೋಗ್ಯ ಮತ್ತು ಯಶಸ್ಸಿಗೆ ಹೀಗೆ ಬಣ್ಣದ ಬಣ್ಣದ ಇವಿಲ್ ಐಗಳಿವೆ. ಬಿಳಿ ಶುದ್ಧತೆ, ಏಕಾಗ್ರತೆ ಮತ್ತು ಹೊಸದಾಗಿ ಪ್ರಾರಂಭಿಸುವ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಕಪ್ಪು ನಕಾರಾತ್ಮಕ ಶಕ್ತಿಯನ್ನು ತೆಗೆದುಹಾಕುವ ಶಕ್ತಿಶಾಲಿ ಬಣ್ಣ, ಪರಮ ರಕ್ಷಣೆಯನ್ನು ನೀಡುತ್ತದೆ.

ಬಣ್ಣ ಬಣ್ಣದ ಮಣಿಗಳನ್ನು ಬೆಳ್ಳಿ ಹಾಗೂ ಚಿನ್ನದಲ್ಲಿ ಕಟ್ಟಿಸಿ ಹಾಕಿಕೊಳ್ಳಲಾಗುತ್ತದೆ. ಬಣ್ಣದ ಮಣಿಗಳ ಮಧ್ಯೆ ಇವಿಲ್ ಐ ಇರುವ ಚಿಹ್ನೆಗಳ ಬ್ರೇಸ್ಲೆಟ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ.

ಪ್ರತಿ ಬಣ್ಣವೂ ತನ್ನದೇ ಆದ ಶಕ್ತಿಯನ್ನು ಹೊಂದಿದೆ. ಬಣ್ಣಗಳಿಂದಲೇ ಮನಸ್ಸಿಗಾದ ಗಾಯಗಳಿಗೆ ಥೆರಪಿಯೂ ನೀಡಲಾಗುತ್ತದೆ. ಹಾಗಾಗಿ ನಮ್ಮ ಅಭೀಪ್ಸೆ ಹಾಗೂ ಕನಸುಗಳಿಗೆ ಹೊಂದಿಕೆಯಾಗುವ ಬಣ್ಣವನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ. ತಾಯಿತಗಳು ರಕ್ಷಣೆ ಒದಗಿಸುವುದರ ಜತೆಗೆ ವೈಯಕ್ತಿಕ ಅಭಿರುಚಿಗೂ ಹೊಂದಿಕೆಯಾಗುವಂತಿದ್ದರೆ ಅದುವೇ ಹೊಸ ಫ್ಯಾಷನ್ ಸ್ಟೇಟ್‌ಮೆಂಟ್ ಆಗಬಹುದು. ಏನಂತೀರಾ? ■

